ನಾಯಕರುಗಳು ವಿಪರೀತ ಗಾಳಿ ಬಂತ್ತು ಮಳೆಗೆ ಸಿಲುಕಿ ದೋಣಿ ಅಡಿ ಮೇಲಾಗಿ ಬಿದ್ದು ಮೃತಪಟ್ಟಿರ ತ್ತಾರೆ. ಅದುದರಿಂದ ಮೇಲ್ಕಾಣಿಸಿದ ಮೃತಪಟ್ಟವರ ಕುಟುಂಬಕ್ಕೆ ಪರಿಹಾರವನ್ನು ಕೋ ಈಗಾಗಲೇ ನಾನು ಸರಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತೇನೆ. ಮೃತರ ಕುಟುಂಬಕ್ಕೆ ತುರ್ತಾಗಿ ಪರಿಹಾರವನ್ನು ಒದಗಿಸುವರೇ ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು).—ಜಿಲ್ಲಾಧಿಕಾರಿಯವರಿಂದ ಕೂಡ ರಿಪೋರ್ಟ್ ಬಂದಿದೆ. ಪ್ರತಿಯೊಬ್ಬರಿಗೂ ಎರಡು ಸಾವಿರ ರೂಪಾಯಿಗಳನ್ನು ಮುಖ್ಯ ಮಂತ್ರಿಯವರ ಫಂಡ್‌ನಿಂದ ಕೊಡಲಾಗುವುದು.

VII ದಾವಣಗೆರೆಯಲ್ಲಿರತಕ್ಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಕ್ಕೆ ಮಾನ್ಯತೆಯನ್ನು ನೀಡುವ ಬಗ್ಗೆ.

ಶ್ರೀ ಪಂಪಾಪತಿ (ದಾವಣಗೆರೆ).—೧೯೬೯ನೇ ಇಸವಿಯಿಂದ ದಾವಣಗೆರೆಯಲ್ಲಿ ವಿಶ್ವವಿದ್ಯಾಲ ಯದ ಸ್ನಾತಕೋತ್ತರ ಕೇಂದ್ರ ನಡೆಯುತ್ತಿದೆ. ಇದಕ್ಕಾಗಿ ದಾನಿಗಳು ನೂರು ಎಕರೆ ಜಮೀನನ್ನು ದಾವಣಗೆರೆಗೆ ೫ ಕಿ.ಮೀ. ದೂರದಲ್ಲಿರುವ ತೋಳಹುಣಸೆಗ್ರಾಮದಲ್ಲಿ ಕೊಟ್ಟಿರುತ್ತಾರೆ. ಇದಲ್ಲದೆ ರಾಜನಹಳ್ಳಿ ಮನೆತನದ ಶ್ರೀ ಲಕ್ಷ್ಮಣಶೆಟ್ಟಿರು ಟ್ರಸ್ಟ್‌ನವರು ಅವರೂ ಕೂಡ ೨೪ ಎಕರೆ ಜಮೀನನ್ನು ಕೊಟ್ಟಿರುತ್ತಾರೆ. ಒಂದು ವರ್ಷದ ಹಿಂದೆ ರಾಷ್ಟ್ರಪತಿಯವರು ಈ ಕ್ಯಾಂಪಸ್ ಕಟ್ಟಡದ ಶಂಕು ಸ್ಥಾಪನೆಯನ್ನು ಮಾಡಿದರು. ಮಾನ್ಯ ಸಚಿವರಾದ ಶ್ರೀ ರಘುಪತಿಯವರು ಇದಕ್ಕೆ ಸರ್ಕಾರ ಮಾನ್ಯತೆ ಕೊಡುವ ತೀವ್ರ ಆಲೋಚನೆಯಲ್ಲಿ ಇದೆ ಎಂದು ಹೇಳಿದ್ದಾರೆ. ತೇವಣಿಯಾಗಿ ಈಗಾಗಲೇ ಐದು ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ.

ಹೀಗಿದ್ದರೂ ಸಹ ಈ ಕೇಂದ್ರವನ್ನು ವಿಶ್ವವಿದ್ಯಾಲಯದವರು ಸರ್ಕಾರದ ಮಾನ್ಯತೆ ಇಲ್ಲವೆಂಬ ಕಾರಣದಿಂದ ರದ್ದುಮಾಡುವುದಾಗಿ ತಿಳಿದುಬಂದಿದೆ. ಇದು ದಾವಣಗೆರೆ ಮತ್ತು ಚಿತ್ರದುರ್ಗದ ಜನತೆಗೆ ಮಾಡುತ್ತಿರುವ ಅನ್ಯಾಯವಾಗಿದೆ. ಸರ್ಕಾರ ಈಗಾಗಲೇ ಸ್ನಾತಕೋತ್ತರ ಕೇಂದ್ರಕ್ಕೆ ಏಕ ಇನ್ನೂ ಮಾನ್ಯತೆ ಕೊಟ್ಟಿಲ್ಲವೆಂದು ಅರ್ಥವಾಗುತ್ತಿಲ್ಲ. ಇದರ ಹಿಂದೆ ರಾಜಕೀಯ ಇದೆಯೇ ಎಂದೂ ಅರ್ಥವಾಗುತ್ತಿಲ್ಲ. ಮಾನ್ಯತೆ ಕೊಟ್ಟು ಸರ್ಕಾರ ಈ ಸ್ನಾತಕೋತ್ತರ ಕೇಂದ್ರವನ್ನು ಉಳಿಸಬೇಕಾಗಿದೆ. ಇದನ್ನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—ಮಾನ್ಯ ಸದಸ್ಯರ ಪ್ರಶ್ನೆಯಲ್ಲೇ ಉತ್ತರ ಅಡಗಿದೆ ಇದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಇಲ್ಲವೆಂದು ಹೇಳಿಲ್ಲ. ಇದಕ್ಕೆ ವಿಶ್ವವಿದ್ಯಾನಿಲಯದ ಆಯೋಗದವರು ಕೆಲವು ನಿಬಂಧನೆಗಳನ್ನು ವಿಧಿಸಿದ್ದಾರೆ, ಈ ನಿಬಂಧನೆಗಳನ್ನು ಪೂರೈಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಆದ್ದರಿಂದ ಇದು ಸ್ಥಳಾಂತರ ಮಾಡದಂತಾಗಿ ಏನೇನು ಪ್ರಯತ್ನ ಮಾಡಬೇಕೋ ಅವನ್ನು ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ.

VIII ಭಾರತೀಯ ಕಲಾಮಂದಿರದಲ್ಲಿರುವ ಅಂಧ ವಿದ್ಯಾರ್ಥಿಗಳಿಗೆ ವ್ಯಾಸಂಗ ಭತ್ಯೆಯನ್ನು ಕೊಡದಿರುವುದು.

ಶ್ರೀ ಪಟಮಕ್ಕಿ ರತ್ನಾಕರ (ತೀರ್ಥಹಳ್ಳಿ) —ಭಾರತೀಯ ಕಲಾಮಂದಿರದಲ್ಲಿ ವ್ಯಾಸಂಗ ಮಾಡು ತ್ತಿರುವ ಅಂಧ ವಿದ್ಯಾರ್ಥಿಗಳಿಗೆ ೧೯೮೪-೮೫ನೇ ಸಾಲಿನ ವ್ಯಾಸಂಗ ಭತ್ಯೆ ಮಂಜೂರುಗಿದ್ದು ರುಜು ವಾತು ಪಡಿಸಲು ವಿದ್ಯಾರ್ಥಿಗಳು ಹೋದನಂತರ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು, ಮೈಸೂರು ಇವರು ಮಂಜೂರು ಹಣವನ್ನು ಪೋತ ಮಾಡಿದ್ದರು. ವಿಚಾರಿಸಿಗಾಗ ಆಯವ್ಯಯ ಇರುವುದಿಲ್ಲ, ಮೇ ತಿಂಗಳಲ್ಲಿ ಖಂಡಿತ ಮಾಡಿಸಿಕೊಡುತ್ತೇವೆ ಎಂದು ಹೇಳಿದ್ದರು. ಮೇ ತಿಂಗಳಿನಲ್ಲಿ ಮತ್ತೆ ವಿಚಾರಿಸಿದಾಗ ಇದೇ ನಿರ್ದೇಶಕರು ಪೋಲೀಸರನ್ನು ಕರೆಸಿ ವಿದ್ಯಾರ್ಥಿಗಳನ್ನು ಹೊರತಳ್ಳಿದರು. ಭಾರತೀಯ ಕಲಾಮಂದಿರ, ರಾಮಾನುಜ ರಸ್ತೆ ಮೈಸೂರು ಇಲ್ಲಿಗೆ ಹೋಗಿ ದಿನಾಂಕ ೧೯-೭-೮೫ರಂದು ಸುಮಾರು ೧೦ ಗಂಟೆ ರಾತ್ರಿ ಸಮಯದಲ್ಲಿ ದಬ್ಬಾಳಿಕೆ ನಡೆಸಿ ಬಲವಂತ ವಾಗಿ ಎಲ್ಲಾ ದಾಖಲಾತಿಗಳನ್ನೂ ನಿರ್ದೇಶಕರು ವಶಪಡಿಸಿಕೊಂಡು ಹೋಗಿರುತ್ತಾರೆ. ಮತ್ತೆ